ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಮಾನ್ಯ ಉಪಾಧ್ಯಕ್ಷರೆ, ಸಕ್ಕರೆ ಉತ್ಪಾದನೆ ಲಾಭದಾಯಕವಲ್ಲ. ಕನ್‌ವರ್ಷನ್ ಚಾರ್ಜಸ್ ನೋಡಿದರೆ ಸಕ್ಕರೆ ಕಾರ್ಖಾನೆ ಎನ್ನುವ ಹೆಸರು ಬಿಟ್ಟರೆ ಇವತ್ತು ಸಕ್ಕರೆ ಬೈ ಪ್ರಾಡಕ್ಟ್ ಆಗುತ್ತದೆ. ಮಾನ್ಯ ದೇಶಪಾಂಡೆಯವರು ಇಲ್ಲಿ ಇದ್ದಾರೆ. ನೇರವಾಗಿ ಎಥೆನಾಲ್ ಉತ್ಪಾದನೆಯನ್ನು ಸಕ್ಕರೆ ಕಾರ್ಖಾನೆಯಲ್ಲಿ ಮಾಡುವುದಕ್ಕೆ ಅಥವಾ ಎಥೆನಾಲ್ ಪ್ಲಾಂಟ್ ಮಹಾರಾಷ್ಟ್ರದಲ್ಲಿ ಕೆಲವು ಕಡೆ ಕೊಟ್ಟಿದ್ದಾರೆ, ಆ ರೀತಿ ಏನಾದರೂ ಮಾಡುತ್ತೀರಾ?

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಉಮೇಶ್ ಕತ್ತಿಯವರು ಸಕ್ಕರೆ ಕಾರ್ಖಾನೆಯಲ್ಲಿ ಸಕ್ಕರೆ ಬದಲಿಗೆ ಎಥೆನಾಲ್ ಉತ್ಪಾದನೆ ಮಾಡುವುದಕ್ಕೆ ಪ್ಲಾನ್ ಮಾಡುತ್ತಿದ್ದಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ಮಹಾರಾಷ್ಟ್ರದಲ್ಲಿ ಎಥೆನಾಲ್ ಪ್ಲಾಂಟ್‌ಗೆ ಪರ್ಮಿಷನ್ ಕೊಟ್ಟಿದ್ದಾರೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಅದು ಕೇಂದ್ರ ಸರ್ಕಾರ ಕೊಡಬೇಕು.

(ಗೊಂದಲ)

ಶ್ರೀ ಎಂ. ಮಹದೇವ:- ಮಾನ್ಯ ಉಪಾಧ್ಯಕ್ಷರೆ, ಐದು ಪರ್ಸೆಂಟ್ ಎಥೆನಾಲ್ ಅನ್ನು ಪೆಟ್ರೋಲ್‌ಗೆ ಮಿಕ್ಸ್ ಮಾಡುವುದಕ್ಕೆ ಅವಕಾಶವನ್ನು ಸೆಂಟ್ರಲ್ ಗೌವರ್ನ್‌ಮೆಂಟ್ ಮಾಡಿಕೊಟ್ಟಿದೆ. ಆ ವಿಚಾರದಲ್ಲಿ ಯಾವ್ಯಾವ ರಾಜ್ಯದಲ್ಲಿ ಮೊಲಾಸಿಸ್ ಎಷ್ಟೆಷ್ಟು ಉತ್ಪತ್ತಿ ಆಗುತ್ತದೆ ಮತ್ತು ಸಿಗುತ್ತದೆ, ಹಾಗೂ ಅದನ್ನು ಕಾಂಪನ್ಸೇಟ್ ಮಾಡುವುದಕ್ಕೆ ಯೂನಿಯನ್ ಗೌವರ್ನಮೆಂಟ್ ಜೊತೆ ರಾಜ್ಯ ಸರ್ಕಾರದವರು ಮಾತನಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದ ಜೊತೆ ಮಾತನಾಡಿ, ನಮ್ಮಿಂದ ಎಷ್ಟು ಎಥೆನಾಲ್ ಇಂಪ್ರೂವ್ ಮಾಡುವುದಕ್ಕೆ ಆಗುತ್ತದೆ ಅಷ್ಟನ್ನು ಮಾಡುತ್ತೇವೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ:- ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬರಲಿಲ್ಲ. ಪ್ರಶ್ನೆಗೆ ಉತ್ತರ ಬರಲಿಲ್ಲವೆಂದರೆ ನಾವು ಕೇಳುವಂತಹ ಅವಶ್ಯಕತೆ ಏನಿದೆ? ಮಂತ್ರಿಗಳು ಅದಕ್ಕೆ ಉತ್ತರಿಸುವುದಿಲ್ಲವೆಂದರೆ, ಹೇಗೆ?

ಧಾರವಾಡ ಜಿಲ್ಲೆಯಲ್ಲಿ ಗಂಗಾ ಕಲ್ಯಾಣ ಯೋಜನೆಯ ಅನುಷ್ಠಾನ

193 (2038) ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ (ಕಲ್ಗುಟಗಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಗಂಗಾಕಲ್ಯಾಣ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳು ಎಷ್ಟು; (ಜಿಲ್ಲಾವಾರು ವಿವರ ನೀಡಿ)

ಆ) ಈ ಪೈಕಿ ಧಾರವಾಡ ಜಿಲ್ಲೆಯಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿದ ವಿವರ ಒದಗಿಸಿರಿ; (ತಾಲ್ಲೂಕುವಾರು ಮಾಹಿತಿ)

ಇ) ಇದರಲ್ಲಿ ಈಗಾಗಲೇ ಎಷ್ಟು ಬೋರ್‌ವೆಲ್‌ಗಳನ್ನು ಕೊರೆಸಲಾಗಿದೆ; ಇನ್ನೂ ಎಷ್ಟು ಬಾಕಿ ಇವೆ; ಕೊರೆಸದೇ ಬಾಕಿ ಇರಲು ಕಾರಣಗಳೇನು; ಯಾವಾಗ ಮುಗಿಸಲಾಗುತ್ತದೆ;

ಈ) ಒಂದು ಬೋರ್‌ವೆಲ್‌ಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿರುತ್ತದೆ? (ಜಿಲ್ಲೆಯ ವಿವರ ನೀಡಿ)

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ

1. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ 1822
2. ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ, 26157
3. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ,- 1348

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ).

ಆ) ಧಾರವಾಡ ಜಿಲ್ಲೆಯಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಿದ ವಿವರ.

1. ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ.60
2. ಕರ್ನಾಟಕ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ - 299
3. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ನಿಯಮಿತ - 37

ತಾಲ್ಲೂಕುವಾರು ವಿವರ

1. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ:-
   1) ಕಲ್ಘಟಗಿ 8
   2) ಕುಂದಗೋಳ 7
   3) ಧಾರವಾಡ 16
   4) ಹುಬ್ಬಳ್ಳಿ 5
   5) ನವಲಗುಂದ 1
2. ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ:
   1) ಧಾರವಾಡ 124
   2) ಕಲ್ಘಟಗಿ 70
   3) ಕುಂದಗೋಳ 74
   4) ಹುಬ್ಬಳ್ಳಿ 31
3. ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ:
   1) ಧಾರವಾಡ 25
   2) ಹುಬ್ಬಳ್ಳಿ 11
   3) ಕಲ್ಘಟಗಿ 9
   4) ಕುಂದಗೋಳ 11
   5) ನವಲಗುಂದ 4

ಇ) 1) ಧಾರವಾಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಇವರಿಂದ 37 ಸಾಮೂಹಿಕ ಕೊಳವೆ ಬಾವಿಗಳನ್ನು, 23 ವೈಯಕ್ತಿಕ ಕೊಳವೆ ಬಾವಿಗಳನ್ನು ಈವರೆಗೆ ಕೊರೆಸಲಾಗಿದೆ. ಕೊರೆಯದೇ ಬಾಕಿ ಉಳಿದಿರುವ ಯಾವ ಬೋರ್‌ವೆಲ್‌ಗಳೂ ಇರುವುದಿಲ್ಲ.

2) ಧಾರವಾಡ ಜಿಲ್ಲೆಯಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ 37 ಬೋರ್‌ವೆಲ್‌ಗಳನ್ನು ಕೊರೆಸಲಾಗಿದೆ. 3 ಬೋರ್‌ವೆಲ್‌ಗಳನ್ನು ಕೊರೆಸುವ ಕೆಲಸ ಬಾಕಿ ಉಳಿದಿದೆ. ಇದನ್ನು ಶೀಘ್ರವಾಗಿ ಪೂರ್ಣಗೊಳಿಸಲಾಗುವುದು.

3) ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ವತಿಯಿಂದ ಧಾರವಾಡ ಜಿಲ್ಲೆಯಲ್ಲಿ 1995-96 ರಿಂದ 2002-2003 ರವರೆಗೆ ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ 150 ಕೊಳವೆ ಬಾವಿಗಳನ್ನು ಹಾಗೂ ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ ಅಡಿಯಲ್ಲಿ 149 ಕೊಳವೆ ಬಾವಿಗಳನ್ನು ಕೊರೆಯಿಸಲಾಗಿದೆ, ಗಂಗಾ ಕಲ್ಯಾಣ ಯೋಜನೆ ಅಡಿಯಲ್ಲಿ 3 ಕೊಳವೆ ಬಾವಿಗಳನ್ನು ಹಾಗೂ ವೈಯಕ್ತಿಕ ಕೊಳವೆ ಬಾವಿ ನೀರಾವರಿ ಯೋಜನೆ ಅಡಿಯಲ್ಲಿ 55 ಕೊಳವೆ ಬಾವಿಗಳನ್ನು ಕೊರೆಯಿಸಬೇಕಾಗಿದೆ. ಬಾಕಿ ಉಳಿದಿರುವ ಕೊಳವೆ ಬಾವಿಗಳನ್ನು ಕೊರೆಯಿಸಲು ತ್ವರಿತ ಕ್ರಮ ಕೈಗೊಳ್ಳಲಾಗಿದೆ.

ಈ) ಒಂದು ಬೋರ್‌ವೆಲ್ ಕೊರೆಯಲು ಸರ್ಕಾರವು ಗರಿಷ್ಟ 65,000 ರೂ. ಅನುದಾನ ನೀಡುತ್ತದೆ. ಉಳಿದ ವೆಚ್ಚವನ್ನು ಫಲಾನುಭವಿಯೇ ಭರಿಸಬೇಕಾಗುತ್ತದೆ. ಇದು ಎಲ್ಲಾ ಜಿಲ್ಲೆಗಳ ಹಾಗೂ ಎಲ್ಲಾ ತಾಲ್ಲೂಕುಗಳಿಗೆ ಅನ್ವಯಿಸುತ್ತದೆ. ಆದುದರಿಂದ ಜಿಲ್ಲಾವಾರು ಮಾಹಿತಿ ಒದಗಿಸುವ ಅಗತ್ಯ ಇರುವುದಿಲ್ಲ.

ಅನುಬಂಧ

ಕ್ರ. ಸಂ.	ಜಿಲ್ಲೆ ಹೆಸರು	ಕರ್ನಾಟಕ ರಾಜ್ಯ ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ		ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ		ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ	
		ಸಮುದಾಯ ನೀರಾವರಿ	ವೈಯಕ್ತಿಕ ಕೊಳವೆ ನೀರಾವರಿ	ಸಮುದಾಯ ನೀರಾವರಿ	ವೈಯಕ್ತಿಕ ಕೊಳವೆ ನೀರಾವರಿ	ಸಮುದಾಯ ನೀರಾವರಿ	ವೈಯಕ್ತಿಕ ಕೊಳವೆ ನೀರಾವರಿ
1	2	3	4	5	6	7	8
1.	ಬೆಂಗಳೂರು (ನಗರ)	0	17	25	01	147	123
2.	ಬೆಂಗಳೂರು (ಗ್ರಾ.)	0	36	74	19	356	611
3.	ಬಾಗಲಕೋಟೆ	71	30	56	27	202	407
4.	ಬೆಳಗಾಂ	8	24	35	23	902	669
5.	ಬಳ್ಳಾರಿ	0	10	9	33	277	445
6.	ಬೀದರ್	139	39	43	14	253	206
7.	ಬಿಜಾಪುರ	185	27	118	28	1148	1121
8.	ಚಾಮರಾಜನಗರ	21	27	46	10	373	763
9.	ಚಿಕ್ಕಮಗಳೂರು	8	16	68	17	545	553
10.	ಚಿತ್ರದುರ್ಗ	10	26	75	25	623	1171
11.	ದಕ್ಷಿಣ ಕನ್ನಡ	3	36	2	14	5	118
12.	ದಾವಣಗೆರೆ	2	21	50	34	472	1133

1	2	3	4	5	6	7	8
13.	ಧಾರವಾಡ	4	33	37	23	150	149
14.	ಗದಗ	6	17	32	18	233	276
15.	ಗುಲ್ಬರ್ಗಾ	138	27	101	35	788	643
16.	ಹಾಸನ	8	12	65	15	539	730
17.	ಹಾವೇರಿ	6	20	51	09	583	641
18.	ಕೊಡಗು	0	6	18	19	69	78
19.	ಕೋಲಾರ	2	16	37	08	893	1328
20.	ಕೊಪ್ಪಳ	4	14	32	21	498	217
21.	ಮಂಡ್ಯ	10	9	74	22	403	687
22.	ಮೈಸೂರು	27	18	70	37	356	961
23.	ರಾಯಚೂರು	107	33	53	31	85	77
24.	ಶಿವಮೊಗ್ಗ	4	22	42	24	456	882
25.	ತುಮಕೂರು	2	9	39	09	635	867
26.	ಉಡುಪಿ	2	0	-	-	10	96
27.	ಉತ್ತರಕನ್ನಡ	6	30	22	32	169	145
	ಒಟ್ಟು	773	574	1274	548	11170	14987

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ:- ಮಾನ್ಯ ಉಪಾಧ್ಯಕ್ಷರೆ, ನಾನು ಕೇಳಿದಂತಹ ಪ್ರಶ್ನೆಗೆ ಈಗಾಗಲೇ ಮಾಹಿತಿಯನ್ನು ಕೊಟ್ಟಿದ್ದಾರೆ. ಸಂತೋಷದ ಸಂಗತಿ. ನಾನು ಧಾರವಾಡ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಕೇಳಿದ ಪ್ರಶ್ನೆಗೆ 396 ಕೊಳವೆ ಬಾವಿ ಕೊಟ್ಟಿದ್ದೇವೆ ಎಂದು ಉತ್ತರ ಕೊಟ್ಟಿದ್ದು, ಅದರಲ್ಲಿ ನನ್ನ ತಾಲ್ಲೂಕಿಗೆ 87 ಮಾತ್ರ ಕೊಟ್ಟಿದ್ದಾರೆ. ಅಲ್ಪಸಂಖ್ಯಾತರಿಗೆ ಎಂಟು, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ 70 ಹಾಗೂ ಹಿಂದುಳಿದ ವರ್ಗಕ್ಕೆ 9 ಕೊಟ್ಟಿದ್ದು, ಇವುಗಳು ಯಾವುದಕ್ಕೂ ಸಾಲುವುದಿಲ್ಲವೆನ್ನುವಂತಹ ಮಾತನ್ನು ಮಾನ್ಯ ಸಚಿವರಿಗೆ ತಿಳಿಸುತ್ತೇನೆ. ಏಕೆಂದರೆ ನನ್ನ ಮತದಾರ ಕ್ಷೇತ್ರಕ್ಕೆ ಎರಡು ತಾಲ್ಲೂಕು ಬರುತ್ತವೆ. ಹುಬ್ಬಳ್ಳಿ ಮತ್ತು ಕಲ್ಘಟಗಿ ತಾಲ್ಲೂಕುಗಳು ಬರುತ್ತವೆ. ಅದು ಮಲೆನಾಡು ಅಭಿವೃದ್ಧಿ ಪ್ರದೇಶದಲ್ಲಿ ಇರುವಂತಹ ಒಂದು ಮತಕ್ಷೇತ್ರ. ಅಲ್ಲಿ ಸಾಕಷ್ಟು ಅಲ್ಪಸಂಖ್ಯಾತರು ಹಾಗೂ ಹಿಂದುಳಿದವರು ಇದ್ದಾರೆ. ಅಲ್ಲಿ 13 ಲಂಬಾಣಿ ತಾಂಡಗಳು ಇವೆ. ಅಲ್ಲಿ ಎಲ್ಲರಿಗೂ ಸರ್ಕಾರದಿಂದ ಭೂಮಿಯನ್ನು ಕೊಟ್ಟಿದ್ದಾರೆ ಅವರಿಗೆ ಬೋರ್ ಹಾಕಿಸಿ ನೀರು ಸಪ್ಲೈ ಮಾಡಿದರೆ ಅನುಕೂಲವಾಗುತ್ತದೆ. ಆದುದರಿಂದ ಹೆಚ್ಚಿನ ಪ್ರಮಾಣದಲ್ಲಿ ನಮ್ಮ ತಾಲ್ಲೂಕಿಗೆ ಬೋರ್ ಕೊರೆಸಬೇಕೆಂದು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಉಪಾಧ್ಯಕ್ಷರೆ ನಾವು ಏನು ಅಲೋಕೇಷನ್ ಮಾಡುತ್ತಿದ್ದೇವೆ ಅದು ಸಾಲದು ಎನ್ನುವ ಮಾತನ್ನು ಹೇಳಿದ್ದಾರೆ. ಈಗ ಇದು ಪಾಪ್ಯುಲೇಷನ್ ಆಧಾರದ ಮೇಲೆ ಸ್ಯಾಂಕ್ಷನ್ ಕೊಡಬೇಕು. ಈ ಸ್ಕೀಮ್ ಬಹಳ ಪಾಪ್ಯುಲರ್ ಆಗಿದೆ ಮತ್ತು ಇದು ಬಡವರಿಗೆ ಬಹಳ ಸಹಾಯವಾಗುತ್ತದೆ ಎನ್ನುವುದರಲ್ಲಿ ಎರಡನೆ ಮಾತಿಲ್ಲ. ಈ ಸಾರಿ ಪ್ರಿ ಬಜೆಟ್ ಮೀಟಿಂಗ್ ಏನು ನಡೆದಿದೆ ನಮಗೂ ಆರ್ಥಿಕ ಇಲಾಖೆಗೂ ಮತ್ತು ಮಾನ್ಯ ಮುಖ್ಯ ಮಂತ್ರಿಯವರಿಗೂ ಫೈನಾನ್ಸ್ ಮಿನಿಸ್ಟರ್‌ಗೂ ಈ ವಿಚಾರದ ಬಗ್ಗೆ ಗಮನಕ್ಕೆ ತಂದಿದ್ದೇವೆ.

ಮಾನ್ಯ ಸಿಂಧ್ಯಾ ಸಾಹೇಬರು ಈ ಇಲಾಖೆ ಬಗ್ಗೆ ಬೆಳಿಗ್ಗೆ ಮತ್ತು ಹಲವಾರು ಬಾರಿ ಹೇಳಿದ್ದಾರೆ. ಅದಕ್ಕೆ ನೀವು ಕೊಡುವಂತಹ ಅಲಾಟ್‌ಮೆಂಟ್ ಹಣ ಏನೇನೂ ಸಾಲದು ಮತ್ತು ಈ ಕಾರ್ಯಕ್ರಮಗಳಿಗೆ ಇಟ್ಟಂತಹ ದುಡ್ಡು ಸಾಲದು ಎಂದು ಇಲ್ಲೂ ಹೇಳಿದ್ದೇನೆ, ಅಲ್ಲೂ ಹೇಳಿದ್ದೇನೆ, ಎಲ್ಲೆಲ್ಲೂ ಹೇಳಿದ್ದೇನೆ. ಆದುದರಿಂದ ಈ ಸಾರಿ ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಎಲ್ಲಾ ಪ್ರಯತ್ನಗಳನ್ನು ಮಾಡಿದೆ. ನೋಡೋಣ, ನಾಳೆ ಇಷ್ಟೊತ್ತಿಗೆ ಸ್ವಲ್ಪ ವಿಚಾರಗಳೆಲ್ಲಾ ನಮ್ಮ ಗಮನಕ್ಕೆ ಬರುತ್ತವೆ. ಅದಕ್ಕೆ ಕಾಯಬೇಕು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದೇನೆಂದರೆ, ಎರಡು ತಾಲ್ಲೂಕಿಗೆ ಪ್ರತಿನಿಧಿಯಾಗಿರುವುದರಿಂದ ಜಾಸ್ತಿ ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಉಪಾಧ್ಯಕ್ಷರೆ, ಈಗ ಇಷ್ಟು ತಾಲ್ಲೂಕಿಗೆ ಇಷ್ಟು ಎಂದು ಮಾಡಿದ್ದೇವೆ. ಅದರಲ್ಲಿ ಒಂದೂವರೆ ತಾಲ್ಲೂಕು ಇದ್ದರೆ ಒಂದೂವರೆ ಬರುತ್ತದೆ. ಒಂದೂ ಕಾಲು ತಾಲ್ಲೂಕು ಇದ್ದರೆ ಒಂದೂ ಕಾಲು ಬರುತ್ತದೆ. ತಾವು ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಿಂದುಳಿದವರು ಜಾಸ್ತಿ ಇದ್ದಾರೆ, ಆದುದರಿಂದ ಈ ಕಡೆ ಗಮನ ಹರಿಸಿ ಎಂದು ಹೇಳಿದ್ದಾರೆ, ಆ ಮಾತನ್ನು ನಾನು ಗಮನದಲ್ಲಿಟ್ಟುಕೊಳ್ಳುತ್ತೇನೆ.

ಶ್ರೀ ಚಿಕ್ಕಸಗೌಡ ಸಿದ್ದಸಗೌಡ ಈಶ್ವರಗೌಡ:- ಈಗಾಗಲೇ ಬೋರ್‌ವೆಲ್ ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ಏನಾಗಿದೆ ಎಂದರೆ ಫಲಾನುಭವಿಗಳನ್ನು ನಾವು ಆಯ್ಕೆ ಮಾಡಿದ್ದೇವೆ. ಆ ಲಿಸ್ಟ್ ಅನ್ನು ಅವರಿಗೆ ಕಳುಹಿಸಿಕೊಟ್ಟು ಬೋರ್ ಹಾಕುವುದಕ್ಕೆ ಅಲ್ಲಿ ಹೋದಾಗ ಅವರಿಗೆ ಏನು ತೊಂದರೆ ಕೊಡುತ್ತಿದ್ದಾರೆ ಎಂದರೆ ನಿಮ್ಮ ಬೋರ್ ಪೈಪ್‌ನಿಂದ 60 ಮೀಟರ್ ದೂರದಲ್ಲಿದೆ, ಆದ್ದರಿಂದ ನಿಮಗೆ ಬೋರ್ ಹಾಕುವುದಕ್ಕೆ ಬರುವುದಿಲ್ಲವೆಂದು ಆ ಫಲಾನುಭವಿಗಳು ಹೇಳುತ್ತಾರೆ. ಮತ್ತೊಂದು ಕಡೆ ಕರೆಂಟ್ ದೂರವಾಗುತ್ತದೆ ಅದಕ್ಕೆ 30-40 ಸಾವಿರ ಖರ್ಚು ಬರುತ್ತದೆ, ಅದಕ್ಕೆ ನಿನ್ನ ಕೈಯಲ್ಲಿ ರೊಕ್ಕ ಹಾಕುವುದಕ್ಕೆ ಆಗುವುದಿಲ್ಲವೆನ್ನುವ ವಿಚಾರವನ್ನು ಕೂಡ ಫಲಾನುಭವಿಗಳಿಗೆ ಹೇಳುತ್ತಿದ್ದಾರೆ. ಇನ್ನೊಂದು ವಿಚಾರವೇನೆಂದರೆ ಈಗಾಗಲೇ ತಾವು ತಾಲ್ಲೂಕಿನ ಅಂಕಿಅಂಶ ಕೊಟ್ಟಿದ್ದೀರಿ, ಅದರಲ್ಲಿ ಎಷ್ಟು ಕಲ್ಲಟಗಿ ಮತಕ್ಷೇತ್ರಕ್ಕೆ ಎಷ್ಟು ಬೋರ್ ಕೊಟ್ಟಿದ್ದೀರಿ? ಹಾಗೂ ಎಷ್ಟು ಬೋರ್ ಹಾಕಿದ್ದೀರಿ ಎನ್ನುವ ವಿಚಾರವನ್ನು ಕೇಳಿದ್ದೇನೆ. ಇದಕ್ಕೆ ಸಮರ್ಪಕವಾದ ಉತ್ತರವನ್ನು ಮಾನ್ಯ ಸಚಿವರು ನಮಗೆ ಕೊಡಬೇಕು. ತಾವು ಬೋರ್ ಕೊಟ್ಟಿದ್ದೀರಿ? ಹಾಗೂ ಎಷ್ಟು ಕೊರೆಸಿದ್ದೀರಿ? ಎಷ್ಟು ಕೊರೆಸಬೇಕು? ಉಳಿದದ್ದು ಯಾವಾಗ ಕೊರೆಸಿ ಕೊಡುತ್ತೀರಿ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರು ಕೇಳಿದ ಪ್ರಶ್ನೆಗೆ ತಾವು ತಾಲ್ಲೂಕು ವೈಸ್ ಕೊಡುತ್ತೇವೆಂದು ಹೇಳಿದಿರಿ. ಆದರೆ ತಾವು ತಾಲ್ಲೂಕು ವೈಸ್ ಎಂದು ಕೊಡುವುದಿಲ್ಲ, ಕ್ಷೇತ್ರ ಎಂದು ಹಾಕಿಬಿಡುತ್ತೀರಿ. ಕ್ಷೇತ್ರ ಎಂದು ಹಾಕುವುದರಿಂದ ಎರಡೆರಡು ತಾಲ್ಲೂಕು ಸೇರಿದ ಕ್ಷೇತ್ರಕ್ಕೆ ನಮಗೆ ಬಹಳ ಅನ್ಯಾಯವಾಗುತ್ತದೆ. ಕೆಲವು ಕಡೆ ಮೂರು ತಾಲ್ಲೂಕು ಇದೆ. ಆದುದರಿಂದ ತಾಲ್ಲೂಕು ಎಂದು ಹಾಕಬೇಕು. ಬೇರೆ ತಾಲ್ಲೂಕಿನಲ್ಲಿ ಪರ್ಸಟೇಜ್ ಇರುತ್ತದೆ, ಅದನ್ನು ಹಂಚಿಕೊಂಡು ನಾವು ತೆಗೆದುಕೊಳ್ಳುತ್ತೇವೆ. ಆದುದರಿಂದ

ದಯವಿಟ್ಟು ತಾಲ್ಲೂಕು ವೈಸ್ ಮಾಡಬೇಕು. ಇನ್ನು ತಾವೇನು 65 ಸಾವಿರ ರೂಪಾಯಿ ಬೋರ್‌ಗೆ ಕೊಡುತ್ತಿದ್ದೀರಿ ಅದಕ್ಕಿಂತ ಹೆಚ್ಚಾಗಿದ್ದು ಹಾಕು ಎಂದು ಹೇಳುತ್ತಿದ್ದಾರೆ. ದುರ್ದೈವ ಅದು 65 ಸಾವಿರ ರೂಪಾಯಿನಲ್ಲಿ ಕೆಲಸ ಮುಗಿಯುತ್ತದೆ. ಆದರೆ ಇಲ್ಲಿ ಟೆಂಡರ್ ಮಾಡಿ 65 ಸಾವಿರ ಅಂಡ್ ಅಬೌವ್ ಎಂದು ಮಾಡಿ ಕೊಟ್ಟಿದ್ದಾರೆ. ಅದು 65 ಸಾವಿರ ರೂಪಾಯಿಯಲ್ಲಿ ಮುಗಿಯುತ್ತದೆ. ಸುಮ್ಮನೆ ಐದು ಸಾವಿರ ಕೇಳುತ್ತಿದ್ದಾರೆ, ಬೇಕಾದರೆ ನಮ್ಮನ್ನು ಕರೆಯಿರಿ ನಿಮ್ಮ ವೇಂಬರಿಗೆ ಬರುತ್ತೇವೆ, ಅದರಲ್ಲಿ ಬಹಳ ಅನ್ಯಾಯವಾಗುತ್ತಿದೆ. ಪಂಪ್‌ಸೆಟ್‌ಗೆ ಏನು ನೀವು ಟೆಂಡರ್ ಮಾಡಿ ಕೊಟ್ಟಿದ್ದೀರಿ ಅದು ಐದು ಸಾವಿರ ರೂಪಾಯಿ ಹೆಚ್ಚಿಗೆಯಾಗುತ್ತದೆ. ಇದನ್ನು ದಯವಿಟ್ಟು ಕಡಿಮೆ ಮಾಡಿ. ಇದೆಲ್ಲಾ 65 ಸಾವಿರ ರೂಪಾಯಿಯಲ್ಲಿ ಮುಗಿಯುತ್ತದೆ. ನಮ್ಮ ಸರ್ಕಾರ ಇದ್ದಾಗ 65 ಸಾವಿರ ರೂಪಾಯಿಯಲ್ಲಿ ಮುಗಿಯುತ್ತಿತ್ತು. ಪಂಪ್‌ಸೆಟ್ ಟೆಂಡರ್ ಏನಿದೆ ಅದನ್ನು ಬದಲಾವಣೆ ಮಾಡಿ, ಅಲ್ಲಿ ಇದ್ದು ಅವರು ತೆಗೆದುಕೊಳ್ಳುವ ಹಾಗೆ ಮಾಡಿದರೆ ಅದು 65 ಸಾವಿರ ರೂಪಾಯಿಯಲ್ಲಿ ಮುಗಿಯುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಉಪಾಧ್ಯಕ್ಷರೆ, ನಮ್ಮ ಕಡೆ 600 ರಿಂದ 700 ಅಡಿಯವರೆಗೆ ಬೋರ್ ಕೊರೆಯಬೇಕು. ಕೆಲವು ಭಾಗಗಳಲ್ಲಿ ಅದೇ ರೀತಿ ಇದೆ. ಅದು ಮಾನ್ಯ ಸಚಿವರಿಗೆ ಗೊತ್ತು.

ಇದರಲ್ಲಿ 65 ಸಾವಿರ ರೂಪಾಯಿಗಳು ಯೂನಿಟ್ ಕಾಸ್ಟ್ ಕೊಡುತ್ತೇವೆ, 35 ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಮಾಡಬೇಕೆಂದು ಹೇಳಿದ್ದಾರೆ, ಪವರ್‌ಗೆ 7 ಸಾವಿರ ರೂಪಾಯಿಗಳನ್ನು ಕಟ್ಟಬೇಕಾಗುತ್ತದೆ, ಮಿಕ್ಕ ಹಣವನ್ನು ನೀವು ಡಿಪಾಸಿಟ್ ಮಾಡಿ ಎಂದು ಹೇಳುತ್ತಾರೆ. ಕೊಳವೆ ಬಾವಿ ಬಹಳ ಡೀಪ್ ಆಗಿ ಹೋಗತ್ತದೆನ್ನುವ ದೃಷ್ಟಿಯಿಂದ ಹೇಳುತ್ತಾರೆ, ಆ 35 ಸಾವಿರ ರೂಪಾಯಿಗಳನ್ನು ಕಟ್ಟುವಂತಹ ಶಕ್ತಿ ಆ ದಲಿತರಿಗಾಗಲೀ ಆ ಸಮಾಜದವರಿಗಾಗಲೀ ಇಲ್ಲ. ಅದಕ್ಕೆ ತಾವು ಈಗ ಇರುವಂತಹ 65 ಸಾವಿರ ರೂಪಾಯಿಗಳ ಯೂನಿಟ್ ಕಾಸ್ಟ್ ಅನ್ನು ಜಾಸ್ತಿ ಮಾಡಿ, ಅದನ್ನು ಸಂಪೂರ್ಣವಾಗಿ ತುಂಬಿ ಕೊಡುವಂತಹ ವ್ಯವಸ್ಥೆಯನ್ನು ಮಾಡಿ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಅಷ್ಟು ಹಣ ತುಂಬಲಿಕ್ಕೆ ಆಗುತ್ತದೆಯೋ? ಅದರಲ್ಲೂ ನಮ್ಮ ಭಾಗಗಳಲ್ಲಿ ಸಾಧ್ಯವಿಲ್ಲ. ಬೇರೆ ಭಾಗಗಳಲ್ಲಿ ಏನೋ ಗೊತ್ತಿಲ್ಲ. ನಮ್ಮ ಕಡೆಗಳಲ್ಲಿ, ಬೋರ್‌ವೆಲ್ ಪಂಪ್‌ಸೆಟ್ ಅಳವಡಿಸಿ ನೀರನ್ನು ತೆಗೆದುಕೊಳ್ಳಬೇಕೆಂದರೆ ಇತ್ತೀಚಿನ ದಿವಸಗಳಲ್ಲಿ ಅದು ಒಂದು ಲಕ್ಷ ರೂಪಾಯಿಗಳಾಗುತ್ತದೆ. ಅದಕ್ಕೋಸ್ಕರ ನೀವು ಯೂನಿಟ್ ಕಾಸ್ಟ್ ಕೊಡುವ ಕೆಲಸ ಈ ಬಡವರಿಗೆ ಮಾಡದೇ ಇದ್ದರೆ, ಯಾರೂ 35,000 ರೂಪಾಯಿಗಳನ್ನು 25,000 ರೂಪಾಯಿಗಳನ್ನು, 10,000 ರೂಪಾಯಿಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲ, ಅದು ಹಾಗೆ ಉಳಿದು ಹೋಗಿದೆ. That is the position. ಇಂಥಾದ್ದನ್ನು ನಾವು ಆಯ್ಕೆ ಮಾಡುವುದಕ್ಕೆ ಆಗುತ್ತಿಲ್ಲ.

ಶ್ರೀ ಕರಿಯಣ್ಣ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಬಚ್ಚೇಗೌಡರು ಹೇಳಿದ ಹಾಗೆ ಮೊದಲು 150 ಅಡಿ, 180 ಅಡಿಗೆ ಬೋರ್‌ವೆಲ್ ಕೊರೆಯಲಾಗುತ್ತಿತ್ತು. ಈಗ 250, 300, 400, 500 ಅಡಿಗಳವರೆಗೂ ಹೋಗಬೇಕಾಗಿದೆ. ಈಗ ಇರುವ 65,000 ರೂಪಾಯಿಗಳು ಯೂನಿಟ್ ಕಾಸ್ಟ್ ಸಾಕಾಗುವುದಿಲ್ಲ. ಮತ್ತೆ ಜನಗಳಿಗೆ ದುಡ್ಡನ್ನು ಕಟ್ಟಿ, ಕೆಇಬಿ ಡಿಪಾಸಿಟ್ ಕಟ್ಟಿ

ಎಂದು ಇವರು ಯಾವಾಗ ಹೇಳುತ್ತಾರೆಂದರೆ ಬೋರ್‌ವೆಲ್ ತೆಗೆದ ಮೇಲೆ ಹೇಳುತ್ತಾರೆ. ಆಗ ಅವನ ಹತ್ತಿರ ದುಡ್ಡು ಇರುವುದಿಲ್ಲ . ಈಗ ಕಟ್ಟುವುದಕ್ಕೂ ಆಗುವುದಿಲ್ಲ. ಆಗ ಬೋರ್‌ವೆಲ್ ತೆಗೆದಿರುವುದು ನಷ್ಟವಾಗುತ್ತದೆ, ಇವರು ಇವತ್ತಿನವರೆಗೂ ದುಡ್ಡನ್ನು ಕಟ್ಟುವುದಕ್ಕೆ ಆಗಿಲ್ಲ, ಹಾಗಾಗಿ ನಾವು ಈ ಬಗ್ಗೆ ಕಳೆದ ಬಾರಿಯೂ ಒತ್ತಾಯ ಮಾಡಿದ್ದೆವು, ಆಗ ಅವರೇ ಹೌದು ಒಂದು ಲಕ್ಷ ರೂಪಾಯಿಗಳು ಬೇಕಾಗುತ್ತದೆಂದು ಸಚಿವರು ಹೇಳಿದ್ದರು, ಅದನ್ನು ಹೆಚ್ಚಿಗೆ ಮಾಡಿ ಕೊಡುತ್ತೇವೆಂದು ಕಳೆದ ಸಾರಿ ಭರವಸೆಯನ್ನು ಕೊಟ್ಟಿದ್ದರು, ನಾನು ಪರಿಶೀಲನೆ ಮಾಡಿದ್ದೇನೆಂದೂ ಸಹ ಹೇಳಿದ್ದರು. ದಯಮಾಡಿ ಈ ಯೂನಿಟ್ ಕಾಸ್ಟ್ ಅನ್ನು ಒಂದು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಿ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ. ಚನ್ನಿಗಪ್ಪ– ಮಾನ್ಯ ಉಪಾಧ್ಯಕ್ಷರೇ, ಇವತ್ತು ಎಸ್.ಸಿ., ಎಸ್.ಟಿ, ಜನಾಂಕಗಳ ಅಭಿವೃದ್ಧಿಗೋಸ್ಕರ ಸೆಂಟ್ರಲ್ ಗೌವರ್ನಮೆಂಟ್ ಸ್ಟೇಟ್ ಗೌವರ್ನಮೆಂಟ್‌ಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿವೆ. ನಾವು ಅನೇಕ ಕಡೆಗಳಲ್ಲಿ, ನಮ್ಮ ಜಿಲ್ಲೆಯಲ್ಲಿನ ತಾಲ್ಲೂಕುಗಳಲ್ಲಿ ನೋಡಿದಾಗ, ಈ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಶೀಟ್ ಪಬ್ಲಿಕ್‌ನಲ್ಲಿ 48 ರೂಪಾಯಿಗಳು ಒಂದು ಅಡಿಗೆ ಇದ್ದರೆ, ಸರ್ಕಾರದ ರೇಟ್ ಒಂದು ಅಡಿಗೆ 120 ರೂಪಾಯಿಗಳು ಇದೆ, ತಾವು ಎಸ್.ಸಿ., ಎಸ್.ಟಿ., ರವರಿಗೆ ಬೋರ್‌ವೆಲ್ ಕೊರೆಯುವುದಕ್ಕೆ ಆ ರೀತಿಯ ರೇಟ್ ಇದೆ. ಮಾನ್ಯ ಮಂತ್ರಿಯವರನ್ನು ಕೇಳಿ, ಇದು ಅವರಿಗೂ ಗೊತ್ತಿದೆ, ಪ್ರವೇಟ್‌ನವರು 1 ಅಡಿಗೆ 48 ರೂಪಾಯಿ ತೆಗೆದುಕೊಳ್ಳುತ್ತಾರೆ. ಸರ್ಕಾರದವರು ಕೊರೆದರೆ ಒಂದು ಅಡಿಗೆ 120 ರೂಪಾಯಿಗಳು ಇದೆ. ಒಂದು ಮೀಟರ್ ಕೇಸಿಂಗ್ ಪೈಪ್ 90 ರಿಂದ 100 ರೂಪಾಯಿಗಳು ಪ್ರೈವೇಟ್‌ನವರದ್ದು ಇದೆ. ಸರ್ಕಾರದ್ದು ಒಂದು ಮೀಟರ್‌ಗೆ 400 ರೂಪಾಯಿಗಳು ಇದೆ. ಆದುದರಿಂದ ಹಿಂದೆ ಏನು 150-200 ಅಡಿಗೆ ನೀರು ಸಿಗುತ್ತಿತ್ತು, ಆಗ 65,000 ರೂಪಾಯಿಗಳನ್ನು ಕೊಡುತ್ತಿದ್ದರು, ಈಗ ಇದು 90,000 ರೂಪಾಯಿಗಳು ಅಥವಾ 1,00,000 ರೂಪಾಯಿಗಳು ಆಗುತ್ತದೆ. ಈಗ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಈ ಎಸ್.ಸಿ, ಎಸ್.ಟಿ. ಜನಾಂಗದವರಿಗೆ ಕೊಡುವಂತಹ ಅನುಕೂಲಗಳು ಏನಿವೆ ಅದರಲ್ಲೂ ನಿರುದ್ಯೋಗಿ ರೈತರಿಗೆ, ಜಮೀನು ಇಟ್ಟುಕೊಂಡಿರುವವರಿಗೆ ನೀರು ಕೊಡದಿದ್ದರೆ ಜೀವನ ಮಾಡುವುದಕ್ಕಾಗುವುದಿಲ್ಲ. ಇದು ಮಾನ್ಯ ಮಂತ್ರಿಯವರಿಗೆ ಗೊತ್ತಿರುವಂತಹ ವಿಚಾರವಾಗಿದೆ. ಆದುದರಿಂದ ಇವರ ಕಾಲದಲ್ಲಿ ಇವರಿಗೆ 1,00,000 ರೂಪಾಯಿಗಳನ್ನು ಮಾಡುವುದಲ್ಲದೆ, ಇವರು ವಿದ್ಯುಚ್ಛಕ್ತಿಗೆ ದುಡ್ಡನ್ನು ಕಟ್ಟಬೇಕೆಂದು ಏನು ಹೇಳುತ್ತಿದ್ದಾರೆ. ಅದು ಸಾಧ್ಯವಾಗುವುದಿಲ್ಲ, ಮತ್ತೆ 65,000 ರೂಪಾಯಿಗಳಿಗಿಂತ ಹೆಚ್ಚಿಗೆ ಖರ್ಚಾದರೆ ಹಣವನ್ನು ಕಟ್ಟಬೇಕೆಂದು ಹೇಳುತ್ತಾರೆ, ಇವರು ಮೊದಲೇ ಕಟ್ಟಿ ಎಂದು ಹೇಳುತ್ತಾರೆ, ಆದರೆ ಅವರಲ್ಲಿ ಹಣವಿಲ್ಲ. ವಿದ್ಯುಚ್ಛಕ್ತಿಯದು ಹಾಗೂ ಹೆಚ್ಚಿಗೆ ಖರ್ಚಾದ ದುಡ್ಡು ಇರುವುದಿಲ್ಲ. ಆಮೇಲೆ ಕಟ್ಟಿ ಎಂದು ಹೇಳುತ್ತಾರೆ. ಈಗ ಕೇಂದ್ರ ಸರ್ಕಾರದ ಮತ್ತೆ ರಾಜ್ಯ ಸರ್ಕಾರದ ಸ್ಕೀಮ್ ಏನಿದೆ, utterly failure ಆಗುವ ಹಾಗೆ ಮಾಡುತ್ತಿದ್ದೇವೆ, ಆದುದರಿಂದ ದಯ ಮಾಡಿ ಮಾನ್ಯ ಸಚಿವರು ಇದರ ಬಗ್ಗೆ ಪರಿಶೀಲನೆ ಮಾಡಿ, ಈ ಜನಾಂಗದವರನ್ನು ಕೂಡಲೇ ಅಭಿವೃದ್ಧಿಪಡಿಸಬೇಕೆಂಬ ಆಸೆ ಇದ್ದರೆ, ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಹೆಚ್ಚಿಗೆ ಹಣವನ್ನು ಬಿಡುಗಡೆ ಮಾಡಬೇಕೆಂದು ಹೇಳುತ್ತೇನೆ, ನಾಲ್ಕು ಬೋರ್‌ವೆಲ್ ಕೊಡುತ್ತಾರೆ, ನಮ್ಮಲ್ಲಿ ಶೇಕಡ 75 ರಿಂದ 80ರಷ್ಟು ಎಸ್.ಸಿ. ಮತ್ತು

ಎಸ್.ಟಿ, ಹಾಗೂ ಹಿಂದುಳಿದ ಜನಾಂಗದವರು ಇರುವಂತಹ ತಾಲ್ಲೂಕುಗಳು ಆಗಿವೆ, ನಮಗೆ ಇವರು ಎರಡು ಬೋರ್‌ವೆಲ್‌ಗಳನ್ನು ಕೊಟ್ಟರೆ ಹೇಗೆ? ಆದುದರಿಂದ ದಯಮಾಡಿ ಮಾನ್ಯ ಮಂತ್ರಿಯವರು ಹೆಚ್ಚಿನ ಪೋಟಾವನ್ನು ಅಂದರೆ 10 ರಿಂದ 15 ರಷ್ಟು ಒಂದು ತಾಲ್ಲೂಕಿಗೆ ಕೊಡುವಂತಹ ವ್ಯವಸ್ಥೆ ಮಾಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರೆಲ್ಲರೂ ಯೂನಿಟ್ ಕಾಸ್ಟ್ ಬಗ್ಗೆ ಮಾತನಾಡಿದ್ದಾರೆ, ಇವತ್ತಿನ ರೇಟನ್ನು ನೋಡಿದರೆ ನಮಗೆ 1,00,000 ರೂಪಾಯಿಗಳು ಯೂನಿಟ್ ಕಾಸ್ಟ್ ಬೇಕಾಗುತ್ತದೆ. ಎರಡನೆಯದಾಗಿ "ನೋ, ವಾಟರ್, ನೋಮನಿ" ಎಂದು ಹೇಳುವಂಥಾದ್ದು ಏನಿದೆ, ಇದರಿಂದ ಯಾವ ಏಜೆನ್ಸಿಗಳೂ ಮುಂದೆ ಬರುತ್ತಿಲ್ಲ. ಇದರ ಬಗ್ಗೆ ಯಾರು ಮುಂದೆ ಬಂದು ಬೋರ್‌ವೆಲ್‌ಗಳನ್ನು ಕೊರೆದಿದ್ದಾರೆಂಬುದನ್ನು ಆಡಳಿತ ಪಕ್ಷದವರೇ, ಹೇಳಲಿ, ಈ ರೀತಿ ಇರುವುದರಿಂದ ಈ "ನೋವಾಟರ್ ನೋಮನಿ" ಎಂದು ಏನಿದೆ ಇದನ್ನು ತೆಗೆಯಬೇಕಾಗುತ್ತದೆ. ಇಲ್ಲಿ ಇವರು ಒಂದು ರೇಟನ್ನು ಫಿಕ್ಸ್ ಮಾಡಿ ಏಜನ್ಸಿಯವರಿಗೆ ಕೊಟ್ಟರೆ, ಅವರು ಮುಂದೆ ಬಂದು ಬೋರ್‌ವೆಲ್ ಕೊರೆಯುಮಂತಹ ಕೆಲಸವನ್ನು ಮಾಡುತ್ತಾರೆ. ಈಗ ಬರಗಾಲವಿರುವುದರಿಂದ ನೀರು ಲಭ್ಯವಾಗುವುದಿಲ್ಲವೆನ್ನುವ ದೃಷ್ಟಿಯಿಂದ ಯಾರು ಮುಂದೆ ಬರುತ್ತಿಲ್ಲ. ಆದುದರಿಂದ ಮಾನ್ಯ ಮಂತ್ರಿಯವರು ಇದಕ್ಕೆ ಏನು ಪರಿಹಾರವನ್ನು ಕಂಡು ಹಿಡಿಯುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಎ. ನಾರಾಯಣಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಈಗ ನಾನು ಹೇಳುವುದೇನೆಂದರೆ, ಬೆಂಗಳೂರು ಜಿಲ್ಲೆಯಲ್ಲಿ ಮೂರು ಬಾರಿ ಟೆಂಡರ್ ಮಾಡಿದ್ದಾರೆ. ಯಾವುದೇ ಗುತ್ತಿಗೆದಾರರು ಮುಂದೆ ಬರುತ್ತಿಲ್ಲ ಮತ್ತು ಎಸ್.ಸಿ., ಎಸ್.ಟಿ. ಕಾರ್ಪೋರೇಷನ್‌ನಿಂದ ಏನು ಬೋರ್‌ವೆಲ್‌ಗಳನ್ನು ಹಾಕಿಸುತ್ತೇವೆ. ಅಲ್ಲಿ 15,000 ರೂಪಾಯಿಗಳನ್ನು ಕೊಟ್ಟರೆ ಬೋರ್‌ವೆಲ್ ಪಾಯಿಂಟ್ ಐಡೆಂಟಿಫೈ ಮಾಡುತ್ತಾರೆ. ಈ ದುಡ್ಡು ಕೊಡಲಿಲ್ಲವೆಂದರೆ ಅವರ ಹೊಲಕ್ಕೆ ನೀರಿಲ್ಲ. ಈ ವಿಷಯದಲ್ಲಿ ಬಹಳಷ್ಟು ಅವ್ಯವಹಾರಗಳು ನಡೆದಿವೆ, ದೂರುಗಳು ಬಂದಿವೆ. ಈ ದೂರುಗಳು ಕೊಟ್ಟರೆ, ಯಾವುದೇ ಇಲಾಖೆಗಳಿಂದಲೂ ತನಿಖೆಯಾಗುತ್ತಿಲ್ಲ. ಯಾವ ಅಧಿಕಾರಿ 15,000 ರೂಪಾಯಿಗಳನ್ನು ತೆಗೆದುಕೊಂಡಿದ್ದಾನೆ, ಅವನು ಬೇರೆ ಕಡೆಗೆ ಹೋಗುವುದಕ್ಕೆ ಟ್ರಾನ್ಸ್‌ಫರ್‌ಗೆ ಪರ್ಮಿಷನ್ ಕೊಟ್ಟಿದ್ದೀರಿ. ಇದರ ಬಗ್ಗೆ ತನಿಖೆಯಾಗಬೇಕಾಗಿದೆ, ಮತ್ತೆ ಯೂನಿಟ್ ಕಾಸ್ಟ್ ಬಗ್ಗೆ ಹೆಚ್ಚು ಹಣವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿ, ಮತ್ತೆ "ನೋ ವಾಟರ್, ನೋ ಮನಿ" ಎಂದು ಏನು ಸ್ಕೀಮ್ ಇದೆ, ಇದನ್ನು ತೆಗೆಯದಿದ್ದರೆ, ಈ ಯೋಜನೆ ಜಾರಿಗೆ ಬರುವುದಿಲ್ಲ.

ಶ್ರೀ ಬಿ. ಸೋಮಶೇಖರ್:– ಮಾನ್ಯ ಉಪಾಧ್ಯಕ್ಷರೇ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ, ಹಾಗೂ ಹಿಂದುಳಿದ ವರ್ಗದವರಿಗೆ ಏನಾದರೂ ಸ್ವಲ್ಪ ಅರ್ಥಿಕವಾಗಿ ಫಲಪ್ರದವಾದ ಕಾರ್ಯಕ್ರಮವಿದೆಯೆಂದರೆ ಇದೊಂದೇ, ಆದುದರಿಂದ ಹೋದ ವರ್ಷ ಬಜೆಟ್ ಭಾಷಣದಲ್ಲಿ ಏನು ಹೇಳಿದ್ದರೆಂದರೆ 5,000 ಬೋರ್‌ವೆಲ್‌ಗಳನ್ನು ಎಸ್.ಸಿ, ಎಸ್.ಟಿ, ಕಾರ್ಪೋರೇಷನ್‌ನಿಂದ ತೆಗೆಸುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಮಾನ್ಯ ಕಾಗೋಡು ತಿಮ್ಮಪ್ಪನವರು ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ 20 ಎಸ್.ಸಿ. ಗಳಿಗೆ ಮತ್ತು 25 ಎಸ್.ಟಿ. ಗಳಿಗೆ ಬೋರ್‌ವೆಲ್‌ಗಳನ್ನು ಒಂದು ಕ್ಷೇತ್ರಕ್ಕೆ ಕೊಟ್ಟಿದ್ದರು. ಆದರೆ ಈ ಸಾರಿ ಅದು 2-3ಕ್ಕೆ

ಇಳಿದಿದೆ. ಈಗ ತಾವು 26,000 ಸಾವಿರ ಎಂದು ಏನು ಹೇಳುತ್ತೀರಿ, ಅದು ತಮ್ಮ ಕಾಲದಲ್ಲಿ ಆಗಿರುವಂಥಾದ್ದು ಅಲ್ಲ, ಅನೇಕ ವರ್ಷಗಳಿಂದ ಆಗಿರುವಂತಹ ಅಂಕಿಅಂಶಗಳನ್ನು ಕೋಟ್ಟಿದ್ದೀರಿ, ನಾನು ಈ ಬಗ್ಗೆ ಏನು ಸಲಹೆ ಕೊಡುತ್ತೇನೆಂದರೆ ಎರಡು, ಮೂರು ಬಾರಿ ಸೂಚನೆ ಕೊಟ್ಟಿದ್ದೇನೆ. ನಬಾರ್ಡ್‌ನಿಂದಲಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ಎಷ್ಟು ಬೇಡಿಕೆ ಇದೆ, ಅದಕ್ಕೆ ನಬಾರ್ಡ್‌ನ ಅಸಿಸ್ಟೆಂಟ್ಸ್ ತೆಗೆದುಕೊಂಡು ಅದನ್ನು ಹಂತಹಂತವಾಗಿ, ಎಷ್ಟು ಬೇಡಿಕೆಗಳು ಇವೆ, 2-3 ವರ್ಷಗಳಲ್ಲಿ ಮುಗಿಸುವಂತಹ ಒಂದು ಯೋಜನೆಯನ್ನು ಮಾಡಿ, ಎಂದು ಹಿಂದಿನ ಕಾರ್ಯದರ್ಶಿಯವರಿಗೂ ಹೇಳಿದ್ದೆ. ಆದರ ಬಗ್ಗೆ ತಾವು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಿರೆಂಬುದು ಗೊತ್ತಿಲ್ಲ. ಮೊನ್ನೆ ದಿವಸ ನಾನು ಒಂದು ಸೂಚನೆಯನ್ನು ಕೊಟ್ಟಿದ್ದೇನೆ, ಅದು ಏನೆಂದರೆ ಕೇಂದ್ರ ಸರ್ಕಾರದ ಒಂದು ಯೋಜನೆ ಇದೆ ಎಸ್‌ಜಿಎಸ್‌ವೈ ಎಂದು ಇದೆ, ಇದರಲ್ಲಿ ನೀರಾವರಿ ಯೋಜನೆಗಳಿಗೆ, ಅದು ಇಂಡಿವಿಜಿಯಲ್ ಬೋರ್‌ವೆಲ್ ಆಗಬಹುದು, ಸಾಮೂಹಿಕ ಬೋರ್‌ವೆಲ್‌ಗಳಾಗಬಹುದು ಅಥವಾ ಸಣ್ಣ ಸಣ್ಣ ಲಿಫ್ಟ್ ಇರಿಗೇಷನ್ ಆಗಬಹುದು. ಅದಕ್ಕೆ ಶೇಕಡ 50ರಷ್ಟು ಸಬ್ಸಿಡಿಯನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ. ಇನ್ನು ಶೇಕಡ 50ರಷ್ಟು ಹಣವನ್ನು ಬ್ಯಾಂಕ್‌ನವರು ಕೊಡುತ್ತಾರೆ. ಈ ಎರಡು ಹಣವನ್ನು ಲಂಕ್ ಮಾಡಿ, ತಾವು ಮತ್ತು ರೂರಲ್ ಡೆವಲಪ್ ಮಂತ್ರಿಗಳು ಇಬ್ಬರು ಕುಳಿತುಕೊಂಡು ಕೇಂದ್ರ ಸರ್ಕಾರದಿಂದ ಇದಕ್ಕೆ ಯಥೇಚ್ಛವಾಗಿ ದುಡ್ಡು ಬರುತ್ತದೆ, ಇದಕ್ಕೆ ನೀವು ದುಡ್ಡನ್ನು ಹಾಕಬೇಕಾಗಿಲ್ಲ. ಆದುದರಿಂದ ಈ ವಿಷಯವನ್ನು ಆದಷ್ಟು ಶೀಘ್ರವಾಗಿ ಮಾಡಬೇಕು, ಇನ್ನು ಮಾನ್ಯ ಎಲ್ಲಾ ಸದಸ್ಯರುಗಳು ಏನು ಹೇಳಿದ್ದಾರೆ, ಇದಕ್ಕೆ 65,000 ರೂಪಾಯಿಗಳು ಸಾಕಾಗುವುದಿಲ್ಲ, ಇದನ್ನು ಜಾಸ್ತಿ ಮಾಡಬೇಕು, ಮತ್ತೆ ಈ ಬೋರ್‌ವೆಲ್‌ಗಳನ್ನು ಒಂದೊಂದು ಕ್ಷೇತ್ರಕ್ಕೆ 15-20 ಕೊಡುವಂತಹ ಯೋಜನೆ ಈ ಬಜೆಟ್‌ನಲ್ಲಿ ಮಾಡುವಂತಹ ಕೆಲಸವಾಗಬೇಕು, ನೀವು ಮಂತ್ರಿಗಳಾದ ಮೇಲೆ ಕಡಿಮೆಯಾಯಿತು, ಮಾನ್ಯ ಕಾಗೋಡು ತಿಮ್ಮಪ್ಪನವರು ಮಂತ್ರಿಗಳಾಗಿದ್ದಾಗ ಗಲಾಟೆ ಮಾಡಿ 15-20 ಆದರೂ ಕೊಡಿಸಿದ್ದರು, ನೀವು ಅವರಿಗಿಂತ ಕಡಿಮೆ ಏನಿಲ್ಲ, ನಿಜವಾದಂತಹ ಬ್ಯಾಕ್‌ವರ್ಡ್ ಕ್ಲಾಸ್‌ನವರು ನೀವು, ಸ್ವಲ್ಪ ಹೋರಾಟ ಮಾಡಿ ಹೆಚ್ಚಿಗೆ ಕೊಡಿಸಿ,

ಶ್ರೀ ಪಿ.ಹೆಚ್. ಪೂಜಾರ್:- ಮಾನ್ಯ ಉಪಾಧ್ಯಕ್ಷರೆ, ಇಲ್ಲಿ ಬೋರ್‌ವೆಲ್‌ಗಳನ್ನು ಮೂರು ಕೊಡುತ್ತೀರೋ, ಇಪ್ಪತ್ತು ಕೊಡುತ್ತಿರೋ, ಅದು depending upon your budget ಬಜೆಟ್‌ನಲ್ಲಿ ಕೊಡುತ್ತಾ ಇರುತ್ತೀರಿ, ಈ ಸಲ ನೀವು ಕೇವಲ ಮೂರು ಬೋರ್‌ವೆಲ್‌ಗಳನ್ನು ಕೊಡುತ್ತಿದ್ದೀರಿ, ಅದನ್ನು ಹೆಚ್ಚಿಗೆ ಮಾಡಬೇಕೆಂಬ ಬೇಡಿಕೆ ಇದೆ, ಇದರ ಜೊತೆಗೆ ಏನಾಗಿದೆ, ನೀವು 65,000 ರೂಪಾಯಿಗಳಿಗೆ ಯೂನಿಟ್ ಎಂದು ಏನು ಮಾಡಿದ್ದೀರಿ, ಅಲ್ಲಿ ಬಡವರು ತಮ್ಮದೇ ಆದಂತಹ 25,000, 30,000 ರೂಪಾಯಿಗಳನ್ನು ಹಾಕಿ, ಇವರು ಬ್ಯಾಂಕ್‌ಗಳಲ್ಲಿ ಲೋನ್ ತೆಗೆದುಕೊಂಡು ಈ ಹಣವನ್ನು ಹಾಕುತ್ತಾರೆ, ಒಟ್ಟಾರೆ ಆ ಯೂನಿಟ್‌ಗೆ ಸಮವಾಗುವಂತೆ ಮಾಡಿ ಕೆಲಸ ಮಾಡುತ್ತಾರೆ, ಈಗ ಬರಗಾಲವಾಗಿರುವುದರಿಂದ ಇಲ್ಲಿ ಗ್ರೌಂಡ್ ವಾಟರ್ ಕೆಳಗಡೆ ಹೋಗಿ, ಇದು ಬತ್ತಿ ಹೋಗುವಂತಹ ಸ್ಥಿತಿ ಬಂದಿದೆ. ಇಲ್ಲಿ ಸರ್ಕಾರ ಒಂದು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು, ಮೊದಲನೆಯದಾಗಿ ಗ್ರೌಂಡ್ ವಾಟರ್ ಜಾಸ್ತಿ ಮಾಡಿಸುವಂಥಾದ್ದು, ಅದನ್ನು ವಾಚ್ ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಂಡು, ಆ

ಬಡವರಿಗೆ ಹೆಲ್ಪ್ ಆಗುವಂಥಾದ್ದು, ಮೇಂಟೇನನ್ಸ್ ಫಂಡ್‌ನಿಂದ ಫೇಲ್ ಆಗಿರುವಂಥಾದ್ದಕ್ಕೆ, ಈ 15,000, 20,000 ರೂಪಾಯಿಗಳಿಂದ ಕಮೆನ್ಸ್ ಆಗಿರುವಂತಹ ಕಾರ್ಯಕ್ರಮಗಳು ಇದ್ದರೆ, ಅಂಥಾದ್ದಕ್ಕೆ ತಾವು ಯೋಜನೆಯನ್ನು ಹಾಕಿಕೊಳ್ಳಬೇಕು.

ಉಪಾಧ್ಯಕ್ಷರು:- ಆಯಿತು, ಮಾನ್ಯ ಮಂತ್ರಿಯವರೆ, ತಾವು ಉತ್ತರವನ್ನು ಕೊಡುವುದಕ್ಕೆ ಮೊದಲು ನಾನು ತಮಗೆ ಹೇಳುವುದೇನೆಂದರೆ, ಸ್ವತಃ ನಮ್ಮ ಕ್ಷೇತ್ರದಲ್ಲಿ ತಾವು ಎರಡೆರಡು ಎಂದು ಹೇಳಿದ್ದರೂ, ಈ ಬೋರ್‌ವೆಲ್‌ಗಳನ್ನು ಕೊರೆದಿಲ್ಲ, ಕಳೆದು ಮೂರು ವರ್ಷಗಳಿಂದಲೂ ಕೊರೆದಿಲ್ಲ. ಇದರ ಬಗ್ಗೆ ತಮ್ಮ ಇಲಾಖೆಯವರಿಗೆ ಸಾಕಷ್ಟು ಸಲ ಹೇಳಿದರೂ ಅವರು ಏನು ಕೇರ್ ಮಾಡುತ್ತಿಲ್ಲ. ನೀವಾರೂ ಇದರ ಬಗ್ಗೆ ಚುರುಕು ಕೊಡುವುದಕ್ಕೆ ಸಾಧ್ಯವಿದೆಯೋ, ಎಂಬುದನ್ನು ನೋಡಿ.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಉಪಾಧ್ಯಕ್ಷರೆ, ಈಗ ಹಲವಾರು ಸದಸ್ಯರುಗಳಿಂದ ಸಲಹೆಗಳು ಬಂದಿವೆ, ಇವರು ರೇಟ್ ಬಗ್ಗೆ, ಕ್ವಾಂಟಿಟಿಯ ಬಗ್ಗೆ ಸಲಹೆಗಳನ್ನು ಕೊಟ್ಟಿದ್ದಾರೆ, ಮಾಲಫೈಡ್ ಆಡ್‌ಮಿನಿಸ್ಟ್ರೇಷನ್ ಮೇಲೆ ಮಾತನಾಡಿದ್ದಾರೆ, ದುರುಪಯೋಗದ ವಿಚಾರವಾಗಿ ಮಾತನಾಡಿದ್ದಾರೆ, ಮತ್ತೆ ಬೋರ್‌ವೆಲ್‌ಗಳನ್ನು ಕೊಡುವಂತಹ ವಿಚಾರದಲ್ಲಿ 20ಕ್ಕಾದರೂ ಹೆಚ್ಚಿಸಿ, ಇದು ಬಡವರಿಗೆ ಸಹಾಯವಾಗುವಂತಹ ನೇರವಾದ ಯೋಜನೆ ಇದು, ಎಂದು ಮಾನ್ಯ ಬಿ. ಸೋಮಶೇಖರ್‌ರವರು ಹೇಳಿದ್ದಾರೆ. ನಾನು ಮಂತ್ರಿಯಾಗಿ ಬಂದ ಮೇಲೆ ಇದು ಕಡಿಮೆಯಾಗಿದೆ, ಎಂಬ ಮಾತನ್ನು ಮಾನ್ಯ ಹಿರಿಯ ಸದಸ್ಯರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ನಾನು ಎರಡು ಪರ್ವತಗಳ ಮಧ್ಯದಲ್ಲಿ ಬಂದಿರುವವನು, ನಾನು ಹೋದ ಬಜೆಟ್‌ನಲ್ಲಿ ಬಂದಿರಲಿಲ್ಲ, ಈ ಬಜೆಟ್‌ನಲ್ಲಿ ಮಧ್ಯೆ ಆರು ತಿಂಗಳುಗಳ ಹಿಂದೆ ಬಂದಿದ್ದೇನೆ, ಆದುದರಿಂದ ನಾನು ಮಂತ್ರಿಯಾಗಿ ಬಂದ ಮೇಲೆ ಬಡವರಿಗೆ ಈ ರೀತಿಯಾಯಿತು, ಅಂದರೆ, ನಾನು ಹೋಗುವುದರಿಂದ ಬಡವರಿಗೆ ಒಳ್ಳೆಯದಾಗುತ್ತದೆಂದರೆ ನಾನು ಹೊರಟು ಹೋಗುತ್ತೇನೆ. ಲಕ್ಷಾಂತರ ಜನ ಬಡವರಿಗೆ ಒಳ್ಳೆಯದಾಗುವುದಾದರೆ ನಾನು ಒಬ್ಬ ಏಕೆ ಹೋಗಬಾರದು?

3.30 ಪಿ.ಎಂ.

ಉಪಾಧ್ಯಕ್ಷರು:- ನೀವು ಅಧಿಕಾರದಲ್ಲಿ ಇರಿ. ಕಾಗೋಡು ತಿಮ್ಮಪ್ಪನವರಿಗಿಂತ ಹೆಚ್ಚಿಗೆ ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಎ. ಕೃಷ್ಣಪ್ಪ:- ಒಟ್ಟಾರೆ ಏನೆಂದರೆ, ನೀವೆಲ್ಲಾ ಸರ್ಕಾರದಲ್ಲಿ ನನಗಿಂತ ಬಹಳ ಅನುಭವಿಗಳು, ಬಹಳ ವರ್ಷಗಳಿಂದ ಕೆಲಸ ಮಾಡಿದ್ದೀರಿ, ಪೈಪನಾನ್ಸಿಯಲ್ ಅಲೋಕೇಷನ್ ದೊಡ್ಡ ತಲೆನೋವಾಗಿದೆ. ಈ ವಿಚಾರವನ್ನು ಸಮಗ್ರವಾಗಿ ಚಿಂತಿಸಿ ಪಾಪುಲೇಷನ್‌ನಲ್ಲಿ ಎಸ್‌ಸಿ:ಎಸ್‌ಟಿ ಎಷ್ಟಿದ್ದಾರೆ ಬ್ಯಾಕ್‌ವರ್ಡ್ ಕ್ಲಾಸ್‌ನವರು ಎಷ್ಟಿದ್ದಾರೆ, 1991ಕ್ಕೂ ಇವತ್ತಿಗೆ ಅದು ಎಷ್ಟು ಬೆಳೆದಿದೆ? ಆ ಬೆಳೆದ ಹಿನ್ನೆಲೆಯಲ್ಲಿ ಜನರ ಬದುಕಿಗೆ, ಇವತ್ತು ಕಾರ್ಖಾನೆಗಳು ಮುಚ್ಚಿರುವುದು ಇರಬಹುದು, ಪಬ್ಲಿಕ್ ಸೆಕ್ಟಾರ್ ಕ್ಲೋಸ್‌ಡೌನ್ ಮಾಡುವುದಿರಬಹುದು ಇವೆಲ್ಲವನ್ನು ನೋಡಿದಾಗ ಗ್ರಾಮೀಣ ಪ್ರದೇಶದಲ್ಲಿ ಒಂದೆರಡು ಜಾಗದಲ್ಲಿ ಮಾತ್ರ ಅವರು ಬದುಕುವುದಕ್ಕೆ ಸಾಧ್ಯತೆ ಇದೆ. ಡೇರಿ ಡೆವಲಪ್‌ಮೆಂಟ್ ಚಟುವಟಿಕೆ, ಈ ಗಂಗಾ ಕಲ್ಯಾಣ ಯೋಜನೆ ಅದಕ್ಕಾಗಿ ಇದಕ್ಕೆ ಹೆಚ್ಚು ಒತ್ತನ್ನೂ ಕೊಟ್ಟು ಹೆಚ್ಚು ಮಂಜೂರಾತಿಯನ್ನು ಕೊಡಬೇಕೆನ್ನುವ ವಿಚಾರ ನಾನು ಖಡಾಖಂಡಿತವಾಗಿ ಹೇಳಿದ್ದೇನೆ, ನಾಳೆ ಸಂಜೆ ನೀವು ಕೇಳಿದರೆ ನಾನು ಏನು ಹೊಂವರ್ಕ್

ಮಾಡಿದ್ದೇನೆಂದು, ನಿಮಗೆ ಬೇಕಾದರೆ ತೋರಿಸುತ್ತೇನೆ, ಅದರಲ್ಲಿ ಏನೂ ಅನುಮಾನವಿಲ್ಲ, I have done my part of job. I may not be a rank student, but still for a failed job, home work has been done and the same document has been presented to the Hon'ble Finance Minister ಈಗ ಮತ್ತೊಂದು ಪ್ರಶ್ನೆ ಏನೆಂದರೆ, ನಾರಾಯಣಸ್ವಾಮಿಯವರು, ಬೆಂಗಳೂರು ಜಿಲ್ಲೆಯಲ್ಲಿ ಅವ್ಯವಹಾರಗಳಿವೆ ಎಂದು ಹೇಳುತ್ತಾರೆ, ಇವರೆಲ್ಲರೂ ಹೇಳಿದ ದೂರಿಗೆ ನಾನೊಂದು ಮಾತನ್ನು ಈ ಸಂದರ್ಭದಲ್ಲಿ ಈ ಸದನದಲ್ಲಿ ಹೇಳಿದರೆ ತಪ್ಪಾಗಲಾರದು, ಏಕೆಂದರೆ, ಬಹಳ ಜನ ಹಿರಿಯರೆಲ್ಲಾ ಮಾತನಾಡಿದ್ದಾರೆ. ಇದೇ ಕಾರಣಕ್ಕಾಗಿ ನೇರಸಂವಾದ ಕಾರ್ಯಕ್ರಮವನ್ನು ಮಾಡಲಾಯಿತು. ಇವರೆಲ್ಲಾ ಅದರಲ್ಲಿ ಬಂದು ಭಾಗವಹಿಸಬೇಕು, ಈ ಸರ್ಕಾರ ಎಲ್ಲೆಲ್ಲಿ ತಪ್ಪುಗಳನ್ನು ಮಾಡುತ್ತಿದೆ, ಅದನ್ನು ಈ ಸರ್ಕಾರದ ಗಮನಕ್ಕೆ ತರುವುದಕ್ಕೆ ಸಾರ್ವಜನಿಕರಿಗೆ ನೈತಿಕ ಶಕ್ತಿ ಬರಲೆಂದು ನೇರಸಂವಾದ ಕಾರ್ಯಕ್ರಮವನ್ನು ಈ ರಾಜ್ಯ ಸರ್ಕಾರಗಳ ಇತಿಹಾಸದಲ್ಲಿ ಮೊಟ್ಟ ಮೊದಲನೆಯದಾಗಿ ಆಚರಣೆಗೆ ತಂದೆ. ಹಲವಾರು ದೂರುಗಳು ಬಂದಿದ್ದಾವೆ, ಅದನ್ನು ನಾರಾಯಣ ಸ್ವಾಮಿಯವರಿಗೆ ನೇರವಾಗಿ ಹೇಳುತ್ತೇನೆ, ಬೇರೆ ಬೇರೆ ಜಿಲ್ಲೆಗಳಲ್ಲಿ ಸ್ವಲ್ಪ ವ್ಯತ್ಯಾಸಗಳಾಗಿವೆ ಎಂದು ಬಂದಿದೆ ಅದನ್ನು ಒಂದು ಬುಕ್‌ಲೆಟ್‌ಗೆ ಕನ್ವರ್ಟ್ ಮಾಡಿ ಸಂಬಂಧಪಟ್ಟವರ ಮೇಲೆ ಏನು ಪ್ರಯೋಗ ಮಾಡಬೇಕೋ ಅದನ್ನು ಮಾಡುತ್ತಿದ್ದೇವೆ. ಬೆಂಗಳೂರು ನಗರ ಜಿಲ್ಲೆಯಲ್ಲಿ, ನಾನು ಪ್ರತಿ ತಿಂಗಳು ಗ್ರಿವೆನ್ಸ್ ಅನ್ನು ಹಿಯರಿಂಗ್ ಮಾಡಲು ಹೋಗುತ್ತಿದ್ದೇನೆ, ನಾರಾಯಣಸ್ವಾಮಿಯವರಿಗೆ ಇದನ್ನು ತಿಳಿಸುತ್ತೇನೆ, ನನಗೆ ಈ ಒಂದು ವಿಚಾರಗಳಲ್ಲಿ ಯಾವುದೇ ದೂರು ಬಂದಿಲ್ಲ. ಈಗ ಅಂತಹ ಯಾವುದಾದರೂ ದೂರುಗಳಿದ್ದರೆ ನೇರವಾಗಿ ನನಗೆ ಕೊಟ್ಟರೆ ನಾನು ಆ ಬಗ್ಗೆ ಸಂಪೂರ್ಣವಾಗಿ ತನಿಖೆ ಮಾಡಿ ನಿಮಗೆ ಸಮಂಜಸವಾದ ಉತ್ತರವನ್ನು ಕೊಡುವುದಕ್ಕೆ ತಯಾರಿದ್ದೇನೆ. ನಮ್ಮ ಎಸ್.ಎಸ್. ಪಾಟೀಲರು 65,000 ರೂಪಾಯಿ ಸಾಕೆಂದು ಏತಕ್ಕೆ ಹೇಳಿದರೊ ಗೊತ್ತಿಲ್ಲ.

ಶ್ರೀ ಎಸ್.ಎಸ್. ಪಾಟೀಲ್:- 65,000 ರೂಪಾಯಿ ಸಾಕೆಂದು ನಾನು ಏತಕ್ಕೆ ಹೇಳಿದೆ ಎಂದರೆ, ತಾವು 150 ಅಡಿ ಇಟ್ಟಿದ್ದೀರಿ, 150 ಅಡಿಗೆ 65,000 ರೂಪಾಯಿ ಸಾಕಾಗುತ್ತದೆ, 600 ಅಡಿಗೆ, 65,000 ರೂಪಾಯಿ ಹೇಗೆ ಸಾಕಾಗುತ್ತದೆ?

ಶ್ರೀ ಎ. ಕೃಷ್ಣಪ್ಪ- ನಮ್ಮ ಜಿಲ್ಲೆಗಳಾದ ಕೋಲಾರ, ಬೆಂಗಳೂರು ನಗರ ಜಿಲ್ಲೆ ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಹೊಸಕೋಟೆಗಳಲ್ಲಿ 700 ಕ್ರಾಸ್ ಮಾಡಿದರೂ ನೀರು ಸಿಗುತ್ತಿಲ್ಲ. ಆದುದರಿಂದ ಆ ಕಾಸ್ಟ್ ಅನ್ನು ಒಂದು ಲಕ್ಷ ರೂಪಾಯಿಗಳಿಗೆ ಏರಿಸಬೇಕೆನ್ನುವ ಏನೊಂದು ವಿಚಾರವಿದೆ ಅದನ್ನು ನಾವು ಈಗಾಗಲೇ ಹೇಳಿದ್ದೇವೆ. ಉಪಾಧ್ಯಕ್ಷರೆ ತಾವೇ ನಮಗೆ ಕನ್‌ಕ್ಷನ್ ಕೊಟ್ಟಿಲ್ಲ ಎನರ್ಜೆಷನ್ ಆಗಿಲ್ಲ ಕೊಳವೆ ಬಾವಿ ಕೊರೆದ್ದೀರಿ ಅಷ್ಟೆ ಎಂದು ಹೇಳಿದಿರಿ. ನನ್ನ ಹತ್ತಿರವಿರುವ ಅಂಕಿ ಸಂಖ್ಯೆಯ ಪ್ರಕಾರ ರಾಜ್ಯದಲ್ಲಿ ಶೇಕಡ 84 ರಷ್ಟು ಫಿಜಿಕಲ್ ಟಾರ್ಗೆಟ್ ಅನ್ನು ಇಂಪ್ಲಿಮೆಂಟ್ ಮಾಡಿದ್ದೇವೆ, ಇನ್ನು ಶೇಕಡ 16 ರಷ್ಟು ಆಗಿಲ್ಲ. ಆ ಶೇಕಡ 16 ಇತ್ತೀಚೆಗೆ ತೆಗೆದುಕೊಂಡು ಅಂಕಿಅಂಶಗಳ ಪ್ರಕಾರ ಈ ಸಮಸ್ಯೆ ಹೇಗೆ ಬಂದಿದೆ ಎಂದರೆ ಕೆಪಿಟಿಸಿಎಲ್ ಇವರು ಕೊಡುವಂತಹ ಮೂಲಭೂತ ಸಾಮಗ್ರಿಗಳೇನಿವೆ ಅದು ಕೊರತೆ ಬಂದಿರುವುದು ಒಂದು ವಿಚಾರ. ಡೆಪಾಸಿಟ್ ಅನ್ನು ಬಡವರ ಕೈಯಲ್ಲಿ ಕಟ್ಟಲಾಗದೆ ಆ ಯೋಜನೆಯನ್ನು ಇಂಪ್ಲಿಮೆಂಟ್ ಮಾಡಲಾಗಿಲ್ಲವೆಂದು ಹೇಳಿರುವುದು ಎರಡನೆ ವಿಚಾರವಾಗಿದೆ. ಮತ್ತೊಂದು ಡಿಸ್ಪೆನ್ಸ್ ಪ್ರಾಬ್ಲಂ, ಮೇನ್ ರೋಡ್‌ನಲ್ಲಿ

ಎಲ್ಲೊ ಒಂದು ಕಡೆ ಕನೆಕ್ಷನ್ ಇದೆ, ಇನ್ನೊಂದು ಕಡೆಗೆ ನಾಲ್ಕೈದು ಕಿಲೋ ಮೀಟರ್ ತೆಗೆದುಕೊಂಡು ಹೋಗಬೇಕು, ಇಂತಹ ವಿಚಾರ ಸರ್ಕಾರದ ಗಮನಕ್ಕೆ ಬಂದಾಗ, ನಾವೊಂದು ರಾಜ್ಯಮಟ್ಟದಲ್ಲಿ ರಿವ್ಯೂ ಮೀಟಿಂಗ್ ಮಾಡಿದೆವು, ಈಗ ಪ್ರತಿ ಜಿಲ್ಲೆಗಳಿಗೂ ಆಫೀಸರ್ಸ್ ಅನ್ನು ರವಾನೆ ಮಾಡಿದ್ದೇವೆ. ಅಲ್ಲಿಯೇ ಕೆಪಿಟಿಸಿಎಲ್ ಹಾಗೂ ನಮ್ಮ ಅಧಿಕಾರಿಗಳು ಕುಳಿತುಕೊಂಡು, ಈಗ 10,000 ರೂಪಾಯಿ ನಾವೇ ಕಟ್ಟಿದರೆ ಎಷ್ಟು ಬೋರ್‌ವೆಲ್‌ಗಳಿಗೆ ಕೂಡಲೇ ವಿದ್ಯುತ್ ಸಂಪರ್ಕ ಕೊಡಬಹುದು, 15,000 ರೂಪಾಯಿ ಬಂಡವಾಳ ಹಾಕಿದರೆ ಎಷ್ಟು ಕನೆಕ್ಟ್ ಮಾಡಬಹುದು, ಈ ಮಾಹಿತಿಗಳನ್ನೆಲ್ಲಾ ಈಗ ತಯಾರು ಮಾಡುತ್ತಿದ್ದೇವೆ, ನನಗನಿಸುತ್ತದೆ ಒಂದು ತಿಂಗಳೊಳಗಾಗಿ, ಸುಮಾರು ಬೋರ್‌ವೆಲ್‌ಗಳನ್ನು ಕನೆಕ್ಟ್ ಮಾಡಲಾಗುತ್ತದೆ. ಕೆಪಿಟಿಸಿಎಲ್‌ಗೆ ಇನ್‌ಫ್ರಾಸ್ಟ್ರಕ್ಚರ್ ರಾ ಮೆಟೀರಿಯಲ್ ಏನು ಬೇಕಾಗಿದೆ ಅದರಲ್ಲೂ ಯಾರು ಬಡಜನರಿದ್ದಾರೆ, ಹರಿಜನ ಗಿರಿಜನರಿದ್ದಾರೆ ಇವರ ಕೆಲಸಕ್ಕೆ ಅವರು ಮೆಟೀರಿಯಲ್ ಇಲ್ಲವೆನ್ನುವ ಮಾತನ್ನು ಸರ್ಕಾರಕ್ಕೆ ಹೇಳಬಾರದು, ತತಕ್ಷಣ ಪ್ರಿಯಾರಿಟಿ ಸೆಕ್ಟಾರ್‌ನಲ್ಲಿ ತೆಗೆದುಕೊಳ್ಳಬೇಕು ಎಂದು ಈಗಾಗಲೇ ಆದೇಶ ಹೋಗಿದೆ. ಆದಷ್ಟು ಬೇಗ ಅದನ್ನು ಜಾರಿ ಮಾಡುತ್ತೇವೆ, ಕಾಸ್ಟ್ ಮತ್ತು ಕ್ವಾಂಟಿಟಿ ಎರಡನ್ನೂ ಕೂಡ ನಾಡಿದ್ದು ನಮಗೆ ಆದರ ಬಗ್ಗೆ ಸ್ವಲ್ಪ ಬೆಳಕು ಬೀಳಬಹುದೆಂದು ನಾನು ಕೂಡ ಆಶಾಭಾವನೆಯಲ್ಲಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಎರಡನೇ ಉಪ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಕ್ಕೆ ಮಂತ್ರಿಗಳು ಉತ್ತರವನ್ನೇ ಕೊಡಲಿಲ್ಲ.

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ:- ಕಲಘಟಗಿ ಮತಕ್ಷೇತ್ರದಲ್ಲಿ ಕೊಟ್ಟ ಬೋರ್‌ವೆಲ್‌ಗಳೆಷ್ಟು ಅದರಲ್ಲಿ ಎಷ್ಟು ಕೊರೆದಿದ್ದೀರೆಂದು ನಾನು ಕೇಳಿದ್ದೇನೆ. ಮಾನ್ಯ ಮಂತ್ರಿಗಳು ಕೊಟ್ಟ ಉತ್ತರದಲ್ಲಿ ಸರಿಯಾಗಿ ಕೊಟ್ಟಿಲ್ಲ, ಧಾರವಾಡದಲ್ಲಿದ್ದಂತಹ ಅಧಿಕಾರಿಗಳೇ ಸರಿಯಾದ ಉತ್ತರವನ್ನು ಕೊಟ್ಟಿಲ್ಲ. ನಾನು ಅವರಿಗೆ ಮೂರ್ನಾಲ್ಕು ಸಲ ದೂರವಾಣಿ ಮಾಡಿ ಕೇಳಿದ್ದೇನೆ. ನಾನು ದೂರವಾಣಿ ಮಾಡಿದಾಗ ಅವರು ಸರಿಯಾಗಿ ಕಛೇರಿಯಲ್ಲಿರುವುದಿಲ್ಲ, ಫಲಾನುಭವಿಗಳು ಖುದ್ದು ಹೋಗಿ ನಾಲ್ಕು ಸಲ ಅವರನ್ನು ಭೇಟಿ ಮಾಡಿ ಕೇಳಿದರೆ ಏನು ಹೇಳುತ್ತಾರೆಂದರೆ, ಅಡ್ವಾನ್ಸ್ ಆಗಿ 20,000 ರೂಪಾಯಿ ತುಂಬಿರಿ, ಗಾಡಿಯನ್ನು ಕಳುಹಿಸುತ್ತೇವೆ, ಇಲ್ಲವಾದರೆ ಕಳುಹಿಸಲಾಗುವುದಿಲ್ಲವೆಂದು ಪದೇ ಪದೇ ಆ ವಿಚಾರಗಳನ್ನು ಅಧಿಕಾರಿಗಳು ಹೇಳುತ್ತಾರೆ. ಅಲ್ಲಿ ಬೋರ್ ತೆಗೆದ ಮೇಲೆ ಎಷ್ಟು ಖರ್ಚು ಬಂದಿದೆ ಅಷ್ಟನ್ನು ಕಟ್ಟಿರೆಂದು ಹೇಳಿದರೆ ನಮ್ಮ ಫಲಾನುಭವಿಗಳು ಕಟ್ಟಲು ತಯಾರಿದ್ದಾರೆ. ಆದರೆ ಪಾಯಿಂಟ್ ಚೆಕ್ ಮಾಡುವುದಕ್ಕಿಂತ ಮೊದಲೇ ಅಧಿಕಾರಿಗಳು ಅಡ್ವಾನ್ಸ್ ರೂಪಾಯಿ 20,000 ತುಂಬಿರೆಂದು ಹೇಳುವುದು ಒಳ್ಳೆಯ ಮಾರ್ಗಸೂಚಿಯಲ್ಲ. ಮಾನ್ಯ ಮಂತ್ರಿಗಳು ನಮ್ಮ ಕ್ಷೇತ್ರಕ್ಕೆ ಬಂದಿದ್ದರು, ಯಾವ ಅಧಿಕಾರಿ ಈ ರೀತಿಯ ತಪ್ಪನ್ನು ಮಾಡಿದ್ದಾರೆ ಅಂತಹವರಿಗೆ ಶಿಕ್ಷೆಯನ್ನು ಕೊಟ್ಟಿದ್ದೀರಿ? ಇನ್ನಾದರೂ ತಮ್ಮ ಅಧಿಕಾರಿಗಳೊಡನೆ ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳಬೇಕೆನ್ನುವ ವಿಚಾರವನ್ನು ತಮಗೆ ಹೇಳಬಯಸುತ್ತೇನೆ.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ಸದಸ್ಯರೇನು ಪದೇ ಪದೇ ಹೇಳುತ್ತಿದ್ದಾರೆ, ಅದಕ್ಕೆ ನಾನೂ ಕೂಡ ಪದೇ ಪದೇ ಅವರಿಗೆ ಭರವಸೆಯನ್ನು ಕೊಡುತ್ತಿದ್ದೇನೆ, ಸರ್ಕಾರ ಸೂಕ್ತ ಕ್ರಮವನ್ನು ಆ ಕ್ಷೇತ್ರಕ್ಕೆ ಸಂಬಂಧಿಸಿದಂತೆ ತೆಗೆದುಕೊಳ್ಳುತ್ತದೆ.